ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೇ, 1990-91ನೇ ಸಾಲಿನಲ್ಲಿ ರಾಜ್ಯದ ಪ್ರತಿ ವಿಧಾನ ಸಭಾ ಮತ ಕ್ಷೇತ್ರದಲ್ಲಿ, 12 ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಡಿ ತೆಗೆದುಕೊಂಡಿದ್ದ ಕಾಮಗಾರಿಗಳನ್ನು 1991-92ನೇ ಸಾಲಿನಲ್ಲಿಯೂ ಮುಂದುವರಿಸಲಾಯಿತು. ಈ ಸಾಲಿಗೆ ಇದಕ್ಕೆ ಹೆಚ್ಚುವರಿಯಾಗಿ ಒಟ್ಟು 10 ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಆದ್ದರಿಂದ ಈ ಕಾರ್ಯಕ್ರಮಕ್ಕೆ ಹಣದ ಅಡಚಣೆ ಆಗುವುದಿಲ್ಲ.

ಈ ಕಾರ್ಯಕ್ರಮದಡಿಯಲ್ಲಿ ಸೇಡಂ ಮತ ಕ್ಷೇತ್ರದಲ್ಲಿಯೂ ಸಹ ಕೆಲವು ಕಾಮಗಾರಿಗಳನ್ನು ತೆಗೆದುಕೊಂಡಿದ್ದು, ಗುತ್ತಿಗೆ ಆಧಾರದ ಮೇಲೆ ಗುತ್ತಿಗೆದಾರರಿಗೆ ವಹಿಸಿಕೊಟ್ಟಿದೆ. ಗುತ್ತಿಗೆದಾರರು ಕೆಲವು ರಸ್ತೆಗಳ ಮೇಲೆ ಸ್ವಲ್ಪ ಜಲ್ಲಿ ಸಂಗ್ರಹಣೆ ಮಾಡಿದ್ದು ಕಾಮಗಾರಿಗಳನ್ನು ನಿಧಾನ ಮಾಡಿದ್ದಾರೆ. ಇವರಿಗೆ ನೋಟೀಸ್‌ಗಳನ್ನು ನೀಡಿದ್ದು ಕಾಮಗಾರಿಗಳನ್ನು ಶೀಘ್ರ ಮುಗಿಸುವಂತೆ ತಿಳುವಳಿಕೆ ನೀಡಲಾಗಿದೆ.

ಈ ಕಾಮಗಾರಿಗಳನ್ನು ಶೀಘ್ರದಲ್ಲಿ ಮುಗಿಸಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

4. ಪುತ್ತೂರು ತಾಲ್ಲೂಕಿನಲ್ಲಿ ಏತ ನೀರಾವರಿ ಯೋಜನೆಯನ್ನು ಜಾರಿಗೊಳಿಸುವುದು.

ಶ್ರೀ ಕೆ. ಕುಶಾಲ (ಸುಳ್ಯ) : ಮಾನ್ಯ ಉಪಾಧ್ಯಕ್ಷಣಿಯವರೆ, ಸುಳ್ಯ ವಿಧಾನ ಸಭಾ ಕ್ಷೇತ್ರದ, ಪುತ್ತೂರು ತಾಲ್ಲೂಕಿನ ಕಸಬ ಕಂದಾ ಹೋಬಳಿಯ ಬಿಳಿನೆಲೆ ಕೈತುಂಬ ಎಂಬಲ್ಲಿ ನೀರಾವರಿ ಇಲಾಖೆಯಿಂದ ಬಂಟ್ರ-ಕೈಕಂಬ, ಬಿಳಿನೆಲೆ, ಆತೂರು, ಕೋಡಿಂಬಳ್ ಎಂಬ ಕಂದಾಯ ಗ್ರಾಮಗಳ ಸುಮಾರು 250 ಕುಟುಂಬಗಳ ರೈತರಿಗೆ 2000 ಎಕರೆ ಜಮೀನು ಕೃಷಿ, ನೀರಾವರಿಗೆ ಅನುಕೂಲವಾಗುವಂತಹ ಕೃಷಿ ನೀರಾವರಿ ಯೋಜನೆ ಕೈಕೊಳ್ಳುವಂತೆ, 1989-90ನೇ ಸಾಲಿನಲ್ಲಿ ಪ್ರಸ್ತಾವನೆ ನಿಲ್ಲಿಸಲಾಗಿತ್ತು.

ಆದರೆ, ಈ ನೀರಾವರಿ ಯೋಜನೆ, ಮಂಜೂರಾತಿಯು ಈತನಕ ಆಗಿರುವುದಿಲ್ಲ.

ಆದುದರಿಂದ ಸದರಿ ಯೋಜನೆ ಯಾವ ಹಂತದಲ್ಲಿದೆ? ಮತ್ತು ಸರಕಾರ ಈ ವರ್ಷ ಮಂಜೂರಾತಿ ನೀಡಲು ಏನು ಕ್ರಮ ಕೈಗೊಳ್ಳಲಿದೆ ಎಂದು ತಿಳಿಯಬಯಸುತ್ತೇನೆ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) : ಪುತ್ತೂರು ತಾಲ್ಲೂಕಿನ ಕಡಬಾ, ಕಡಿವೈಲು ಮತ್ತು ಕುಟ್ಟಿಪಾಡಿ ಹತ್ತಿರ ಏತ ನೀರಾವರಿ ಯೋಜನೆಗೆ 121 ಲಕ್ಷ ರೂಪಾಯಿಗಳ ಪ್ರಾಥಮಿಕ ತನಿಖಾ ವರದಿಯನ್ನು ತಯಾರು ಮಾಡಲಾಗಿದೆ. ಈ ಏತ ನೀರಾವರಿ ಯೋಜನೆಯಿಂದ 524 ಹೆಕ್ಟೇರ್ ಆರೆ ನೀರಾವರಿ ಬೆಳೆಗಳನ್ನು ಖಾರೀಫ್ ಮತ್ತು ರಾಬಿ ಅವಧಿಯಲ್ಲಿ ಬೆಳೆಯಲು ಉದ್ದೇಶಿಸಲಾಗಿದೆ. ನೀರಿನ ದರ ಪ್ರತಿ ಹೆಕ್ಟೇರ್ ಪ್ರತಿ ಬೆಳೆಗೆ 3064 ರೂಪಾಯಿಗಳು ಆಗುತ್ತಿದ್ದು, ಇದು ಆರ್ಥಿಕವಾಗಿ ಶಕ್ಯವೆಂದು ಕಂಡು ಬರುತ್ತದೆ. ದಿನಾಂಕ 30-01-92ರಲ್ಲಿ ಈ ಯೋಜನೆಗೆ ಕುಮಾರಧಾರ ನದಿಯಿಂದ 20.50 ಕ್ಯೂಸೆಕ್ಸ್ ನೀರು ಎತ್ತುವ ಸರ್ಕಾರ ಪರವಾನಗಿ ನೀಡಲಾಗಿದೆ. ಕಾಂಟೂರು ಹಾಗೂ ಕಮಾಂಡ್ ಏರಿಯಾ ಸರ್ವೆಗಳನ್ನು ತೆಗೆದುಕೊಂಡು ಯೋಜನಾ ವರದಿಯನ್ನು ತಯಾರಿಸಿ ಆರ್ಥಿಕ ನೆರವು ಪಡೆಯಲು ಆದಷ್ಟು ಶೀಘ್ರವಾಗಿ ನಬಾರ್ಡ್‌ಗೆ ಕಳುಹಿಸಲಾಗುವುದು.